Regd No B G 155

ಸತ್ಯವಾದಿ

18—10—1965

49th Year
Satyavadi
DAILY
MYSORE 4

ಸ್ಥಾಪಕರು – ಅಂತಃಸೆ ಸಂಸ್ಥೇದಾರ್ ಎಂ ವಿ ಶುಬ್ಬಂತಯ್ಯರು

ಸಂಪಾದಕರು – ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್

2 ಪೈಸೆ

ರಾಜಾಜಿಯನ್ನು ಬಂಧಿಸಿ

ಮದರಾಸು ನಗರದ ಪ್ರಗತಿ ರಂಗ ದಪರ ಕಲ್ಚಾಕ್‌ನಲ್ಲಿರುವ ಕಲ್ಕಿ ಆಫೀಸಿಗೆ ಪ್ರತಿಭಟನಾ ಮೆರವಣಿಗೆ ಹೋಗಿ ಆ ಪತ್ರಿಕೆ ಮತ್ತು ರಾಜಗೋಪಾಲಾಚಾರಿಯವರ ವಿರುದ್ಧ ಘೋಷಣೆಗಳನ್ನು ಕೂಗಿದರು ರಾಜಾಜಿಯವರನ್ನು ಬಂಧಿಸಬೇಕೆಂದು, ಕಲ್ಕಿಯನ್ನು ಸುಡಬೇಕೆಂದು ಅವರು ಘೋಷಿಸಿದರು ಪ್ರದರ್ಶನಕಾರರು ಕೆಲವು ಕಲ್ಕಿ ಪ್ರತಿಗಳನ್ನು ದಹನ ಮಾಡಿದರು.

★

ಈ ವರ್ಷ ಸಿದ್ಧ

ಭಾರತ ತಯಾರು ಮಾಡುತ್ತಿರುವ ವಿಜಯಂತ ಪ್ರಥಮ ಟ್ಯಾಂಕು ಈ ವರ್ಷಕ್ಕೆ ಮೊದಲು ಸಿದ್ಧವಾಗುವುದು.

★

ಮತ್ತೆ ಚಾರಿ

ಗಡಿ ಪಟ್ಟಣವಾದ ಪಠಾಣಕೋಟೆಯಲ್ಲಿ ಬ್ಯಾಕ್ ಔಟ್ ಮತ್ತೆ ಜಾರಿ ಮಾಡಿದೆ

★

ವಿರೋಧಿಸು

ವಿಶ್ವಸಂಸ್ಥೆಗೆ ಚೀನಾ ಪ್ರವೇಶ ವಿರೋಧಿಸುವಂತೆ ಪಾರ್ಲಿಮೆಂಟಿನ ಸದಸ್ಯರು ಅಭಿವ್ಯಾಯಪಟ್ಟಿರುವುದಾಗಿ ನವದೆಹಲಿ ವಾರ್ತೆ.

★ ಗುಂಟೂರು ಕಾಣದ ವಿಮಾನವೊಂದು ಅಸ್ಸಾಮಿನ ಮೇಲೆ ಹಾರುತ್ತಿರುವುದೆಂದು ತಿಳಿಸಿರುವ ವಾರ್ತೆ

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾದಕ್ಷ, ಜ್ಯೋತಿರ್ವಿದ್ವನ್ಮಣಿ
ಪೆಂಪಸ್ಯ ಶ್ರೀಕೃಷ್ಣಜೋಯಿ ಸಂವರಂಡ

19 ಮಂಗಳವಾರ ದಶಮಿ ಅಶ್ಲೇಷ

ಎಣ್ಣೆ ಇದೆ

ಯೋಜನಾ ಸಮಿತಿ ಸದಸ್ಯರೊಬ್ಬರು ರಾಜಸ್ಥಾನದಲ್ಲಿ ಹೇಳಿಕೆಯಿತ್ತು, ಪೀಫರ್ ವಾದ ಬುದ್ಧಿಕ್ಕೆ ಭಾರತವು ಸಾಕಷ್ಟಾಗಿ ಎಣ್ಣೆ ಹೊಂದಿತ್ತೆಂದು ನುಡಿದರು

★

ಅಗುವ ಖರ್ಚು

ನಾಲ್ಕನೆಯ ಯೋಜನೆಯ ಪ್ರಥಮ ವರ್ಷದಲ್ಲಿ ಭಾರತವು ನವೀನ ಸಶಸ್ತ್ರ ಸಜ್ಜಿಕ 30 ಲಕ್ಷ ಸೇನೆ ಹೊಂದಲು 5400 ಕೋಟಿ ರೂಪಾಯಿಗಳು ಅವಶ್ಯಕವೆಂದು ಅಲಹಾಬಾದು ವಾರ್ತೆ ತಿಳಿಸುತ್ತದೆ.

—

ಪ್ರಮುಖ ವಾರ್ತೆಗಳು

ಏಸೂ ಕ್ರಿಸ್ತನ ಸಾವಿಗೆ ಯಹೂದಿಗಳೇ ಕಾರಣರೆಂದು ನಿರ್ಧರಿಸಿರುವುದಾಗಿ ವ್ಯಾಟಿಕಾನ್ ವಾರ್ತೆ.

ಪ್ರಧಾನಿ ಶಾಸ್ತ್ರಿಯವರು ಪಠಾಣಕೋಟೆಗೆ ಎಂಡನೆಯ ಬಾರಿ ಭೇಟಿಯನ್ನಿತ್ತ ಸಂದರ್ಭದಲ್ಲಿ ಭಾರತ ಯಾವುದೇ ಪರಿಸ್ಥಿತಿ ಎದುರಿಸಲು ಸಿದ್ಧವಿರುವೆಂದು ತಿಳಿಸಿದರು

ಪಶ್ಚಿಮ ಬಂಗಾಳದಾಚೆ ಅಕ್ಕಿ ಅಕ್ರಮವಾಗಿ ಸಾಗಾಣಿಕೆಯಾಗುತ್ತಿರುವ ಪ್ರದೇಶವು ಟಗ್ಗೆ ತನಿಖೆಗೆ ಏರ್ಪಾಡು ಮಾಡಲಾಗಿದೆ

ನಿರಾಶ್ರಿತರಾಗಿ ಹೊಸ ದೇಶಗಳಿಗೆ ಹೋಗಿರುವ ಕಬೆಟ್ಟಿನ ಜನರು ತಮ್ಮ ದೇಶಕ್ಕೆ ಬರುವಂತೆ ಅಕಾಶವಾಣಿಯು ಮಾಲಿಕ ಚೀಣಾ ವನು ಮಾಡಿದೆ

ಪ್ರಧಾನಿಗಳಿಗೆ ಕರಡಿಗೆ ಒಗೊಟ್ಟು ನವದೆಹಲಿಯಲ್ಲಿರುವ ಅಖಿಲ ಭಾರತ ಮಹಿಳಾ ಕೇಂದ್ರ ಆಹಾರ ಸಮಿತಿಯು ಕೆಫೆಟೋರಿಯಾದಲ್ಲಿ ಗೋಧಿ ಮತ್ತು ಅಕ್ಕಿ ತಿಂಡಿಗಳನ್ನು ನಿಷ್ಕಸಲಾಗುವುದು

ಪಾಕೀಸ್ತಾನಕ್ಕೆ ಕಾಶ್ಮೀರ ದಕ್ಕುವುದಿಲ್ಲ

ಮಹಿಳಾ ದಿನ

1824 ನೇ ಅಕ್ಟೋಬರು 24 ನೇ ದಿನಾಂಕ ರಾಣಿ ಕಿತ್ತೂರು ಚೆನ್ನಮ್ಮ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟ ಹೂಡಿದ ದಿನವಾದ್ದರಿಂದ ಆ ದಿನವನ್ನು ಮಹಿಳಾ ದಿನವಾಗಿ ಆಚರಿಸಲಾಗುವುದು ಆ ದಿನ ಮಹಿಳಾ ಕ್ಲಬ್‌ಗಳಲ್ಲಿ ಧ್ವಜಾರೋಹಣ, ಕ್ರೀಡಾ ಸ್ಪರ್ಧೆಗಳನ್ನು ನಡೆಸಬಹುದು ಬಾಲಕಿಯರ ಶಾಲೆ, ಕಾಲೇಜು, ಮಹಿಳಾ ಮಂಡಲಿ ಮತ್ತು ಮಹಿಳೆಯರ ಪಾಲಿಟೆಕ್ನಿಕ್‌ಗಳಲ್ಲಿ ಈ ಕಾರ್ಯಕ್ರಮಗಳು ನಿರ್ದಿಷ್ಟವಾಗಿ ನಡೆಯುವುವು

ಬೆಳೆ ಹೆಚ್ಚಬೇಕು

ಪ್ರಧಾನಿ ಶಾಸ್ತ್ರಿಯವರು ಯುವ ಜನ ವಿಶ್ವಸನ್ನದ್ಧತಾ ಸಂಬಂಧದಲ್ಲಿ ಪ್ರಸಾರ ಭಾಷಣ ಮಾಡಿ, ಸಶಸ್ತ್ರ ಹೋರಾಟ ಬೆನ್ನಾಗಿ ನಡೆಯಬೇಕಾದರೆ ಆಹಾರ ಸಮೃದ್ಧಿ ಆಗಬೇಕೆಂದರು

—

ಕಳೆದ ಒಂದು ವಾರದಿಂದ ಹೋರಾಡಿದುದಂ ಫಲವಾಗಿ ಪಶ್ಚಿಮ ಬಂಗಾಳದ ಪೋಲೀಸರು ನಿನ್ನೆ ಹೊಂಚು ಹಾಕಿಕೊಂಡಿರುವ ಭಾರತ ಪ್ರದೇಶದಲ್ಲಿ ತಮ್ಮ ನೆಲೆ ಸ್ಥಾಪಿಸಿಕೊಳ್ಳುವುದರಲ್ಲಿ ಯಶಸ್ವಿಯಾದರು

ಪೂರ್ವ ಪಾಕಿಸ್ತಾನ ರೈಫಲ್ಸು ದಳ ಮತ್ತು ಪಶ್ಚಿಮ ಬಂಗಾಳ ಪೋಲೀಸು ಪಡೆಗಳ ನಡುವೆ ನಾದಿಯಾ ಜಿಲ್ಲೆಯ ಭಾಟಪಾರ ಮತ್ತು ಬೆಟಾಯಿ ಜಿಲ್ಲೆಗಳಲ್ಲಿ ಗುಂಡು ಕಾಳಗ ನಡೆಯಿತೆಂದು ವರದಿಯಾಗಿದೆ

ಬೊಂಬಾಯಿನ ಅಜಾದ ಮೈದಾನದಲ್ಲಿ ನಿನ್ನೆ ಸೇರಿದ್ದ ಭಾರಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ, ಚುಂಬಕ್ಷೇತ್ರದಿಂದ ಪಾಕೀಸ್ತಾನ ಹೋಗಬಿಡಿ ಇದ್ದರೆ, ಭಾರತವೂ ಕೂಡ ಲಾಹೋರ ಕ್ಷೇತ್ರದಿಂದ ವಾಪಸು ಬರುವುದಿಲ್ಲವೆಂಬುದಾಗಿ ನುಡಿದರು.

ಪ್ರಧಾನಿ ಶಾಸ್ತ್ರಿಯವರು ಬಾಲ ಕ್ರೀಡಾ ಕೇಂದ್ರವೊಂದನ್ನು ಪ್ರಧಾನಿ ಶಾಸ್ತ್ರಿಯವರು ನಿನ್ನೆ ಪ್ರಾರಂಭಿಸುತ್ತ ಮಾಡಿದ ಭಾಷಣದಲ್ಲಿ, ಸಾವಿರ ವರ್ಷ ಮಾತ್ರವಲ್ಲ, ಅನಂತವಾಗಿ ಪಾಕೀಸ್ತಾನ ಕಾದಾಡಿದರೂ, ಅದು ಕಾಶ್ಮೀರವನ್ನು ಪಡೆಯಲಾರದು ಎಂದರು

ಬೊಂಬಾಯಿ ಮಾಹುಂಗಾದ ಪಣ್ಡಿತ ಸಭಾ ಭವನದಲ್ಲಿ ಪ್ರಧಾನಿ ಶಾಸ್ತ್ರಿಯವರು ನಿನ್ನೆ ಭಾಷಣ ಮಾಡುತ್ತಾ, ಭಾರತದ ಮೇಲೆ ಪಾಕೀಸ್ತಾನದ ಮೇಲೆ ಆಕ್ರಮಣ ನಡೆಸಿದಾಗ ವಿಶ್ವದ ಬಹುಪಾಲು ದೇಶಗಳು, ಕಡೆಗೆ ಭದ್ರತಾ ಸಮಿತಿಯು ಕೂಡ ಆಕ್ರಮಣವನ್ನು ಖಂಡಿಸಿ ಮಾತನಾಡಿದ್ದುದು ತನಗೆ ವಿಷಾದ ಉಂಟುಮಾಡಿದೆ ಎಂದರು

★

★ ಪ್ರಪಂಚದ ಅಧ್ಯಂತ ಇರುವ ವಿದೇಶಗಳ ನೆಲೆಗಳನ್ನು ನಾಶಗೊಳಿಸಲು ನೂತನ ಶಕ್ತಿಗಳು ಪ್ರತಿಜ್ಞೆ ಮಾಡಬೇಕೆಂದು ಅಧ್ಯಕ್ಷ ಸುಕಾರ್ನೋ ಜಕಾರ್ತಾದಲ್ಲಿ ತಿಳಿಸಿದರು

★ ಗೋಖಲೆಯವರು ಆದರ್ಶ ಜೀವನ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಲೆಂದು ಬೆಂಗಳೂರಿನಲ್ಲಿರುವ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ನಿನ್ನೆ ವೈಸ್ರಾಯ ಪ್ರಹಾರಾಜಂ ಹೇಳಿದರು

ವಾರ್ತಾ ವಿಶೇಷಗಳು

ಮೈಸೂರು— ರಾಷ್ಟ್ರೀಯ ಚೆಕ್ಕ ಉಳಿತಾಯ ಮತ್ತು ರಕ್ಷಣಾ ಉಳಿತಾಯ ಸ್ಕೀಂಗಳ ಒಗ್ಗೆ ಪರಿಣಾಮಕಾರಿ ಜಾಹಿರಿ ಸಂಬಂಧವಾಗಿ ನಿನ್ನೆ ಜಿಲ್ಲಾಧಿಕಾರಿಗಳು ಒಂದು ಉನ್ನತ ಸಭೆ ಏರ್ಪಡಿಸಿದ್ದರು.

o o

ಮೈಸೂರು— ಪಿರಿಯಾಪಟ್ಟಣ ತಾಲ್ಲೂಕು ಚಿಕ್ಕನಾಯಕಹಳ್ಳಿ ಗ್ರಾಮದ ಒಂದು ಕರಿಗೆ ಮೊದ್ದೆ ಎಂ ಎಸ್ ಆರ್ ಟಿ ಬಸ್ಸು ಬಿದ್ದು 10 ಮಂದಿ ಗಾಯಗೊಂಡರು.

o o

ನ್ಯೂಯಾರ್ಕ್— ನ್ಯೂಯಾರ್ಕ್ ಟೈಂಸ್ ಪತ್ರಿಕೆಯು ತನ್ನ ಇತಿಹಾಸದಲ್ಲೇ ಅತ್ಯಂತ ದೊಡ್ಡದಾದ 946 ಪುಟಗಳ ಭಾನುವಾರ ಸಂಚಿಕೆಯನ್ನು ಪ್ರಕಟಿಸಿದೆ. ಈ ಸಂಚಿಕೆ 7 ಪೌಂಡು 14 ಔನ್ಸು ತೂಕವಿದೆ

★

ನವಗ್ರಹ ಪೂಜಾ ಮಹಾತ್ಮೆ

ಮ್ಯೂನಿಕ್ (ಡಾಡ್)— ಕ್ರಿ.ಶ 1635 ರಲ್ಲಿ ಪಶ್ಚಿಮ ಜರ್ಮನಿಯು ಪ್ಲೇಗು ಮಹಾವ್ಯಾಧಿಯ ವಿಕಟ ಅಟ್ಟಹಾಸಕ್ಕೆ ಗುರಿಯಾಯಿತು : ವೈದ್ಯರು ತಮ್ಮ ಖಾಸಗಿ ತಾವು ಮಾಡಿಕ್ಕಿರುವಾಗ್ಗೆ ಜನರು ತಮ್ಮ ಕಾರ್ಯವೇನೆಂದೆ ಚಿಂತಿಸತೊಡಗಿದರು ; ಕಾಡುಜನರು ದಯ್ಯಾ ಕಾಣಿಕೆದಿಂದ ಪ್ಲೇಗು ಭೂತವು ಓಡಿಹೋಗುವುದೆಂದು ಅಲ್ಲೊಂದು ನಂಬಿಕೆ ಹುಟ್ಟಿತು ; ಸರಿ, ಆದಕ್ಕೆ ತಕ್ಕಂತೆ ಹಾಡುಗಳ ಸೃಷ್ಟಿಯಾಯಿತು ' ಸೂರ್ಯ ಮುಂತಾದ ಗ್ರಹಗಳ ಸ್ತೋತ್ರವೇ ಈ ಹಾಡುಗಳಲ್ಲಿ ತುಂಬಿದೆ ; ಅತಕತಾಳ ನ್ಯಾಯ ಮೆಬಲೆತೆ ಪ್ಲೇಗು ಓಡಿಹೊಯಿತು ; ಹಾ ! ಇದು ನಮ್ಮ ಕಾಣಿಕೆದಿಂದಲೇ ! ಎಂದರು ಅಂಧಶ್ರದ್ಧೆಯವರು ಅದಂ ಸ್ಮರಣಾರ್ಥವಾಗಿ ಅದೇ ಕಾಣಿಕೆಯನ್ನು ಇಂದೂ ಜರ್ಮನಿಯ ಆಲ್ಪ್ಸ್ ತಪ್ಪಲಿನ ಪ್ರಾಂತ್ಯದಲ್ಲಿ ಏಳು ವರ್ಷಗಳಿಗೊಮ್ಮೆ ಅದ ಸಂಭ್ರಮವಾಗಿ ಏರ್ಪಡಿಸಲಾಗುತ್ತಿದೆ ! (ಯೂ ಪಿ ಎಸ್)

—o—

ಹಣದ ಮಹಿಮೆಯೇ ಮಹಿಮೆ !

ಮ್ಯೂನಿಚ್ (ಡಾಡ್)— ಜಗತ್ತಿನಲ್ಲಿ ನಾಣ್ಯದ ಸೃಷ್ಟಿ ಹೇಗಾಯಿತು ಎಂಬುದನ್ನು ಪೂರ್ಣವಾಗಿ ತೋರಿಸುವಂತಹ ಮ್ಯೂಜಿಯಂ ಒಂದನ್ನು ಬವೇರಿಯಾದಲ್ಲಿ ತೆರೆಯಲಾಗಿದೆ : ಇದೊಂದು ಅಂತರಾಷ್ಟ್ರೀಯ ಪ್ರದರ್ಶನ ; ಯಾವ ಯಾವ ದೇಶದಲ್ಲಿ, ನಾಣ್ಯದ ಉತ್ಪತ್ತಿ ಹೇಗೆ ಆಯಿತು; ಅದು ಯಾವಯಾವ ಬದಲಾವಣೆಗಳಿಗೊಳಗಾಯಿತು ಎಂಬುದನ್ನು ಪೂರ್ಣವಾಗಿ ತೋರಿಸುವ ಈ ಮ್ಯೂಜಿಯಂನಲ್ಲಿ 15000 ವೈವಿಧ್ಯತೆಗಳಿವೆ : ಅಂತೆ ಇಲ್ಲಿ ಮಾಹಮದ್ದರ್ಬಿ ತೊಗಲ ಚೀಲವನ್ನು ಉದಯೋಗಿಸಿದ ತೊಗಲಿನ ನಾಣ್ಯವಿದೆಯೋ ಇಲ್ಲವೋ ತಿಳಿದುಬಂದಿಲ್ಲ !

(ಯೂ ಪಿ ಎಸ್)

Help The Gorakshana

★

ಗೋಸಂರಕ್ಷಣೆಗೆ ಬೆಂಬಲ ನೀಡಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋಸಂರಕ್ಷಣೆ ಪತ್ರಿಕೆಯೆ, ತಾಜಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ಪೈಸೆ

ಪಹಾಯಿಕರು ರೂ 10, ಪ್ರೋತ್ಸಾಹಕರು ರೂ 25 : (ಒಂದು ಸಾರಿಮಾತ್ರ)

ಗೋ ಸಂರಕ್ಷಣೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋಸಂರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ವುಡಲ್ಯಾಂಡ್ಸ್, ವೈಭವ 4 ನೇ ವಾರ

ಶಿ ಸ್ಸೆ

ಆವೊ ಪ್ಯಾರ್ ಕರೆ (ಹಿಂದಿ)

ಶೆ

Aao Pyar Karen

ಜಾಕುಲ್ ಮುಖರ್ಜಿ — ಸೈರಾ ಬಾನು ಇವರ ಕಲಾತ್ಮಕ ನಟನ

ಆಕರ್ಷಣೀಯ ಅಭಿನಯದಿಂದ ಕೂಡಿದ ಸುಂದರ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

ಅಪೆರ— 15-10-65 ರಿಂದ

ಕಲ್ಯಾಣ ಮಂಟಪಂ (ತಮಿಳು)

ಶಿ

ನಟವರ್ಗ— ಅನಂದನ್, ಆರ್ ವಿಜಯ, ಮನೋಹರ್, ಬಾಲತಿ

ತಾಯಿ ನಾಗೇಶ್, ಮನೋರಮ [ದಿನ 3 ಆಟಗಳು]

SHAKTI SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Protect the Cow

ಗೋಸಂರಕ್ಷಣೆ ಮಹತ್ವಾಣಿದಯೂ ಕಾರ್ಯಗಳೂ ಹೆಚ್ಚಾಗಿ ಪಡೆಯಲಿ

Edited, Printed & Published by Dharma prachara n
M S Krishna Rao (Proprietor) at the Satyavadi Press
Chamarajapuram, Mysore 4